MR. SPEAKER.—The question is:

"That leave be granted to introduce the Karnataka Scheduled Castes and Scheduled Tribes (Prohibition of Transfer of Certain Lands) (Amendment) Bill, 1984."

The motion was adopted and leave was granted.

SRI V. L. PATIL (Minister for Revenue).—Sir,

"I introduce the Karnataka Scheduled Castes and Scheduled Tribes (Prohibition of Transfer of Certain Lands) (Amendment) Bill, 1984."

MR. SPEAKER.—The Bill is introduced: Annexure-III

ಮನವಿಗಳು

ಶ್ರೀ ಪಂಪಾಪತಿ.—ಕೆಲವು ಹೈಸ್ಕೂಲ್ ಟೀಚರ್ಸ್ ಬರೀ ನೂರು ರೂಪಾಯಿಗಳಿಗೆ ಕೆಲಸ ಮಾಡುತ್ತಿದ್ದಾರೆ. ಬಿ.ಎ., ಬಿ.ಎಡ್., ಎಂ.ಎಸ್.ಸಿ. ಮಾಡಿರತಕ್ಕವರು ಸಹ ಇದ್ದಾರೆ, ಅಂಥವರು ಹೇಗೆ ೧೦೦ ರೂಪಾಯಿನಲ್ಲಿ ಜೀವನ ಮಾಡುವುದಕ್ಕೆ ಸಾಧ್ಯ ಸ್ವಾಮಿ?

ಅಧ್ಯಕ್ಷರು.—ನೋಟೀಸ್ ಕಳುಹಿಸಿ ಕೊಡಿ.

ಶ್ರೀ ಪಂಪಾಪತಿ.—ಶೂನ್ಯ ವೇಳೆಯಲ್ಲಿ ಸಹ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ ಸ್ವಾಮಿ?

ಅಧ್ಯಕ್ಷರು.—ಈಗ ಶೂನ್ಯ ವೇಳೆ ಇಲ್ಲ. ಆದರ ಬದಲು ನಿಯಮ ೩೩೪ರ ಕೆಳಗೆ ೯ ವಿಚಾರ ಗಳನ್ನು ಆಗಲೇ ಪ್ರಸ್ತಾಪ ಮಾಡಿದ್ದೇವೆ. ನೋಟೀಸ್ ಕಳುಹಿಸಿ ಕೊಡಿ ನಾಳೆ ಖಂಡಿತವಾಗಿಯೂ ತೆಗೆದುಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಆಯಿತು ಸ್ವಾಮಿ.

(ii) ಮೈಸೂರಿನಲ್ಲಿರುವ ಕೃಷ್ಣರಾಜೇಂದ್ರ ಬಟ್ಟೆ ಗಿರಣಿ ಕಾರ್ಮಿಕರು ಮುಷ್ಕರ ಹೂಡಿರುವ ಬಗ್ಗೆ

ಶ್ರೀ ಹೆಚ್. ಗಂಗಾಧರನ್.—ಮೈಸೂರಿನಲ್ಲಿರುವ ಕೃಷ್ಣರಾಜೇಂದ್ರ ಬಟ್ಟೆ ಗಿರಣಿ ಕಾರ್ಮಿಕರು ಕಳೆದ ಒಂದೂವರೆ ತಿಂಗಳಿಂದ ಮುಷ್ಕರ ಹೂಡಿರುವ ವಿಚಾರದಲ್ಲಿ ಮಾನ್ಯ ಕಾರ್ಮಿಕ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಅಜೀಜ್ ಸೇಟ್ (ಕಾರ್ಮಿಕ ಮತ್ತು ವಕ್ಫ್ ಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಹೇಳಿಕೆ ಕೊಡುವ ಅಗತ್ಯವೇನೂ ಇಲ್ಲ. ಕಾರ್ಮಿಕರು ಗಿರಣಿಯನ್ನು ರ್ಯಾಷನಲೈಸ್ ಮಾಡಬೇಕೆಂಬ ಒತ್ತಾಯವನ್ನು ಇಟ್ಟಿದ್ದಾರು. ಈ ಪಂಥ್ಯೆ ತಾತ್ಕಾಲಿಕವಾಗಿ ಗಿರಣಿಯನ್ನು ಪ್ರಾರಂಭ ಮಾಡಬೇಕೆಂಬ ತೀರ್ಮಾನವಾಗಿ, ಇವತ್ತಿನ ದಿವಸ ಗಿರಣಿ ಪ್ರಾರಂಭವಾಗಿದೆ:

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಸ್ವಾಮಿ, ಮೈಸೂರಿನಿಂದ ಕಾರ್ಮಿಕರು ಬಂದಿರುವ ಬಗ್ಗೆ ಮಾನ್ಯ ಮಂತ್ರಿಯವರು ಹೇಳಿಕೆ ಕೊಡಬೇಕೆಂದು ಕೇಳಿದ್ದೆ.

SRI H. GANGADHARAN.—Sir, I call the attention of the Hon'ble Minister for Labour to the closure of Krishnarajendra